MYSORE LEGISLATIVE COUNCIL

Thursday, 29th February 1968.

The House met in the Council Chamber, Vidhana Soudha, Bangalore at Fifteen Minutes past Two of the Clock.

MR. CHAIRMAN (Sri S. C. EDKE) in the Chair.

STARRED QUESTIONS

(to which oral answers were given)

Power Tillers in the State

20. Sri S. MUKUNDA RAO (Teachers' Constituency).—

Will the Minister for Agriculture and Education be pleased to steate:—

(*a*) whether there is a keen demand for power tillers and other farm machinery in the State;

(*b*) the measures taken to meet the demand in full ?

A.—Sri K. V. SHANKARA GOWDA (Minister for Agriculture and Education).—

(*a*) Yes,

(*b*) 275 Japanese Power Tillers made in Japan have been imported into the State since 1965 through the foreign exchange released by the Government of India under the V and VI Yen Credit. Plans are afoot to establish a factory in the State to manufacture power tillers with Japanese collaboration. Attempts are being made to get more number of power tillers from Japan, until manufacturing of the same is started in the country.

ಶ್ರೀ ಎಸ್. ಮುಕುಂದರಾವ್.—ಬೆಂಗಳೂರಿನಲ್ಲಿ ಒಂದು ವಿದ್ಯುತ್ ನೇಗಿಲುಗಳನ್ನು ತಯಾರು ಮಾಡುವ ಕಾರ್ಖಾನೆಯನ್ನು ಸ್ಥಾಪಿಸುವುದಾಗಿ ಎರಡು ವರ್ಷಗಳ ಹಿಂದೆ ಸರ್ಕಾರದವರು ಭರವಸೆ ಕೊಟ್ಟಿದ್ದರು. ಆ ಬಗ್ಗೆ ಏನಾದರೂ ಪ್ರಗತಿಯಾಗಿದೆಯೆ?

ಶ್ರೀ ಕೆ. ವಿ. ಶಂಕರಗೌಡ.—ಕಾರ್ಯಕ್ರಮ ನಡೆಯುತ್ತಿದೆ. ಆದಷ್ಟು ಬೇಗನೆ ಸ್ಥಾಪನೆ ಮಾಡುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ.—ಎಲ್ಲಿ ಸ್ಥಾಪನೆ ಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಬೆಂಗಳೂರಿನಲ್ಲಿ.

ಶ್ರೀ ಎಸ್. ಮುಕುಂದರಾವ್.—ಪಬ್ಲಿಕ್ ಸೆಕ್ಟಾರ್ ಮೂಲಕ ಸ್ಥಾಪನೆಯಾಗುತ್ತದೋ ಅಥವಾ ಪ್ರೈವೇಟ್ ಸೆಕ್ಟಾರ್ ಮೂಲಕ ಸ್ಥಾಪನೆಯಾಗುತ್ತದೋ! ಮತ್ತು ವರ್ಷಕ್ಕೆ ಎಷ್ಟು ಉತ್ಪತ್ತಿಯಾಗುತ್ತದೆ ?

ಶ್ರೀ ಕೆ. ವಿ. ಶಂಕರಗೌಡ.— ವಿ. ಎಸ್. ಟಿ. ಮೋಟಾರ್ ಸಂಸ್ಥೆಯವರು ಜಪಾನಿನ ಸಹಕಾರದಿಂದ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತಾರೆ. ಎಷ್ಟು ತಯಾರು ಮಾಡುತ್ತಾರೆ ಎಂಬುದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

Sri B G. DESHPANDE.—Is it a fact that the Japanese Firm Messrs. MITSU BUSHI was contemplating starting a Factory a long time ago ?

Sri K. V. SHANKARA GOWDA.—They are trying to establish a factory in Bangalore with Messrs. V. S. T. Motors; Messrs. MITSU BUSHI, a Japanese Firm is offering collaboration. The Factory will be located in Bangalore.

Sri B. G. DESHPANDE.—How far has it progressed ?

Sri K. V. SHANKARA GOWDA.—It is under progress.

ಶ್ರೀ ಎಸ್. ಮುಕುಂದರಾವ್.—ಕಾರ್ಖಾನೆ ಸ್ಥಾಪನೆಯಾದ ಮೇಲೆ ಬರೀ ನೇಗಿಲುಗಳನ್ನು ಮಾತ್ರ ತಯಾರು ಮಾಡುತ್ತಾರೋ ಅಥವಾ ಬೇರೆ ಯಂತ್ರಗಳನ್ನು ಸಹ ತಯಾರು ಮಾಡುತ್ತಾರೋ ?

ಶ್ರೀ ಕೆ. ವಿ. ಶಂಕರಗೌಡ.—ಬೇರೆ ಯಂತ್ರಗಳನ್ನು ಸಹ ತಯಾರು ಮಾಡುತ್ತಾರೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಸರ್ಕಾರದವರು ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕೆಂಬ ಚೆಕ್ ಇಟ್ಟುಕೊಂಡಿದ್ದಾರೆ, ಅದರಲ್ಲಿ ಸರ್ಕಾರದ ಭಾಗವೆಷ್ಟು, ಖಾಸಗೀ ಜನರ ಭಾಗವೆಷ್ಟು ? ಅಥವಾ ಖಾಸಗೀಯವರಿಗೇ ಪೂರ್ತಿಯಾಗಿ ಬಿಟ್ಟುಬಿಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಸರ್ಕಾರದ ಭಾಗವೇನೂ ಇಲ್ಲ. ಈ ಕಾರ್ಖಾನೆಯನ್ನು ಪೂರ್ತಿಯಾಗಿ ಖಾಸಗೀಯವರೇ ನಡೆಸುತ್ತಾರೆ.

ಶ್ರೀ ಜಿ. ವಿ. ಆಂಜನಪ್ಪ.—ಈ ದೇಶದಲ್ಲಿ ತಯಾರಾಗುವ ವಿದ್ಯುತ್ ನೇಗಿಲು ಬೆಲೆ ಎಷ್ಟು ?

ಶ್ರೀ ಕೆ. ವಿ. ಶಂಕರಗೌಡ.—ಜಪಾನಿನಿಂದ ಬರತಕ್ಕಂಥ ವಿದ್ಯುತ್ ನೇಗಿಲಿನ ಬೆಲೆಗಿಂತ ಕಡಿಮೆ ಬೆಲೆಗೆ ಇದನ್ನು ಕೊಡುತ್ತೇವೆ.

ಶ್ರೀ ಜಿ. ವಿ. ಆಂಜನಪ್ಪ.—ಈ ವಿದ್ಯುತ್ ನೇಗಿಲುಗಳನ್ನು ಯಾವ ರೀತಿ ಹಂಚುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ —ಹೈರ್ ಪರ್ಚೇಸ್ ಸಿಸ್ಟಂ ಮೇಲೆ ಕೊಟ್ಟಿದ್ದೇವೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ —ಜಪಾನಿನಲ್ಲಿ ತಯಾರಿಸಿದ 275 ವಿದ್ಯುತ್ ನೇಗಿಲುಗಳನ್ನು ತರಿಸಿ ಅವುಗಳನ್ನು ಸರಕಾರದವರೇ ಹಂಚಿದರೇ ಅಥವಾ ಅವುಗಳನ್ನು ಹಂಚುವುದಕ್ಕೆ ಬೇರೆ ಏಜೆನ್ಸಿ ಇತ್ತೇ ?

ಶ್ರೀ ಕೆ ವಿ. ಶಂಕರಗೌಡ —ಸರಕಾರದ ಇರಾಖೆಯ ಮುಖಾಂತರ ಹಂಚಿದೆ.

ಶ್ರೀ ಸಿ. ಎಸ್. ಬಾಲಕೃಷ್ಣ ಗೌಡ.—ಎಲ್ಲಿ ತಯಾರಿಸುವ ವಿದ್ಯುತ್ ನೇಗಿಲುಗಳನ್ನು ಜಪಾನಿನಿಂದ ತರಿಸಿದ ಬೆಲೆಗೆ ಕೊಡುತ್ತೇವೆಂದು ಹೇಳಿದಿರಿ. ಮೊದಲು ಈ ನೇಗಿಲು ಬೆಲೆ 5,000 ರೂಪಾಯಿ ಇತ್ತು. ಈಗ ಅದು 9,000 ರೂಪಾಯಿ ಆಗಿದೆ. ಆದುದರಿಂದ ಯಾವ ಬೆಲೆಗೆ ಕೊಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—9,000 ರೂಪಾಯಿ ಬೆಲೆ ಇರುವುದಿಲ್ಲ.

ಶ್ರೀ ಜಿ. ವಿ. ಆಂಜನಪ್ಪ.—ಈ ವಿದ್ಯುತ್ ನೇಗಿಲು ಬಗ್ಗೆ ಬೇಡಿಕೆ ಎಷ್ಟು ಇದೆ ?

ಶ್ರೀ ಕೆ. ವಿ. ಶಂಕರಗೌಡ.—ಸುಮಾರಾಗಿ ಇದೆ. ಅದನ್ನು ಅಂದಾಜು ಮಾಡಿಲ್ಲ.

ಶ್ರಿ ಜೆ. ಬಿ. ಮಲ್ಲಾರಾಧ್ಯ.—ಈ ಪವರ್ ಟಿಲರ್ಸ್ ಜಿಪೊನ್ ದೇಶದಿಂದ ಖರೀದಿ ಮಾಡುವ ಬೆರೆಗೆ ಇಲ್ಲಿ ಕೂಡ ತಯಾರ್ಮಾಡುವ ಯಂತ್ರಗಳನ್ನು ಕೊಡುತ್ತೇವೆಂದು ಹೇಳಿದಿರಿ. ಹಾಗಾದರೆ ಅಲ್ಲಿಂದ ತರಿಸುವ ಯಂತ್ರಕ್ಕೆ 5,000 ರೂಪಾಯಿ ಬೆರೆ ಇದೆ; ಅಷ್ಟು ಬೆರೆಗೆ ತಯಾರಿಸಿ ಕೂಡು ತ್ತೀರಾ ಈಗಿನ ಬೆರೆ 9,000 ರೂಪಾಯಿ ಇದೆ ಎನ್ನುವುದು ಗೊತ್ತಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅದರ ಬೆರೆ ಈಗ 9000 ರೂಪಾಯಿ ಇಲ್ಲ.

ಶ್ರೀ ಎ. ವೆಂಕಟಪ್ಪ.—ಮುಂದಿನ ವರ್ಷ ಎಷ್ಟು ಇಂಥ ವಿದ್ಯುತ್ ನೇಗಿಲು ತಯಾರಿಸುತ್ತೀರಿ? ಅಂದಾಜು ಏನಾದರೂ ಮಾಡಿದ್ದೀರಾ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿವರ ಇಲ್ಲ.

Smt. S. H. MARKER.—What are the conditions for foreign co'laboration by the Japanese ?

Sri K. V. SHANKARA GOWDA.—Please put a different question; I will answer.

Sri B. G. DESHPANDE.—The power tiller, given here, is for purposes of a different subsoil. Will the Government take care to see that the power tiller which is manufactured here, will be useful for our soil ?

Sri K. V. SHANKARA GOWDA.—They will make a beginning. As and when they gain experience, they will make suitable alterations.

ಶ್ರೀ ಜಿ. ವಿ. ಆಂಜನಪ್ಪ.—ಈ ಪ್ರಾಜೆಕ್ಟಿನ ಯೋಜನೆ ಬಗ್ಗೆ ಇದಕ್ಕೆ ಅಂದಾಜು ತಯಾರು ಮಾಡಿದ್ದೀರಾ ? ಇದಕ್ಕೆ ಬಂಡವಾಳ ಎಷ್ಟು ಹಾಕಿದ್ದೀರಿ ? ಅಥವಾ ಇದಕ್ಕೆ ಎಷ್ಟು ಬಂಡವಾಳ ತಗಲಬಹುದು ?

ಶ್ರೀ ಕೆ. ವಿ. ಶಂಕರಗೌಡ.—ಗೊತ್ತಿಲ್ಲ.

Smt. S. H. MARKER.—Is it not possible for Indians to manufacture these power tillers without foreign collaboration ? Are we not advanced enough after three Five-Year Plans ?

Sri K. V. SHANKARA GOWDA.—We have not so far advanced. In the initial stages some collaboration is necessary.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸರಕಾರದವರು ಎಕ್ಸೈಸ್ ಡ್ಯೂಟಿ ಹಾಕಿದಮೇಲೆ ಏಳು ಸಾವಿರ ರೂಪಾಯಿ ಬೆರೆ ಇದ್ದುದು ಹದಿನಾಲ್ಕು ಸಾವಿರ ರೂಪಾಯಿ ಆಗುತ್ತದೆ. ಆದುದರಿಂದ ಪವರ್ ಟಿಲರ್ಸ್ ಖರೀದಿ ಮಾಡುವಾಗ್ಗೆ ಎಕ್ಸೈಸ್ ಡ್ಯೂಟಿ ವಿನಾಯಿತಿ ಮಾಡಿ ಖರೀದಿ ಮಾಡಿದ್ದೀರಾ? ಇಲ್ಲವೆ ಎಕ್ಸೈಸ್ ಡ್ಯೂಟಿ ವಿನಾಯಿತಿ ಮಾಡುವುದಕ್ಕೆ ಪ್ರಯತ್ನ ಮಾಡಿ ರೈತರಿಗೆ ಕೊಟ್ಟು ಮೋಸಾಟ ಮಾಡುತ್ತೀರಾ ?

ಶ್ರೀ ಕೆ. ವಿ. ಶಂಕರಗೌಡ.—ಮನವಿ ಮಾಡಿದ ಮೇಲೆ ಅದನ್ನು ಯೋಚನೆ ಮಾಡತಾಗುವುದು.

Sri JEEVARAJ HIRACHAND SHAH.—How long will it take for the manufacture of these tillers and make them available in the market ? We are unnecessarily spending on excise and other factors created by devaluation. It will be highly uneconomical to go in for foreign things.

Sri K. V. SHANKARA GOWDA.—Steps are being taken to establish a factory. It is impossible for me to predict how long it will take. As soon as possible we will try to have these things manu actured.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—ವ್ಯವಸಾಯಗಾರರಿಗೆ ಮುಖ್ಯವಾಗಿ ಪ್ರಾಧಾನ್ಯ ಕೊಡ ಬೇಕು ಎಂದು ಇರುವಾಗ್ಗೆ ಪವರ್ ಟಿಲರ್‌ಗಳಿಗೆ ಎಕ್ಸೈಸ್ ತೆರಿಗೆ ಮೂಲ ಬೆಲೆಗಿಂತ ಜಾಸ್ತಿಯಾಗು ವುದರಿಂದ ಕೆಲವು ಸಮಯ ಸೆಂಟ್‌ಪರ್ಸೆಂಟ್ ಆಗುವುದರಿಂದ 20 ಸಾವಿರ ಬೆರೆ ಇದ್ದುದು 40 ಸಾವಿರ ರೂಪಾಯಿ ಆಗುತ್ತದೆ. ಆದುದರಿಂದ ಎಕ್ಸೈಸ್ ತೆರಿಗೆ ವಜಾ ಮಾಡಲು ಸಾಧ್ಯವೇ ? ಮತ್ತು ಹಾಗೆ ಭರವಸೆ ಕೊಡಲು ಸಾಧ್ಯವೇ ?

ಶ್ರೀ ಕೆ. ವಿ. ಶಂಕರಗೌಡ.—ಭರವಸೆ ಕೊಡಲು ಸಾಧ್ಯವಿಲ್ಲ. ಅದು ಆರ್ಥಿಕ ಪರಿಸ್ಥಿತಿಗೆ ಸಂಬಂಧಪಟ್ಟ ವಿಷಯ.

ಶ್ರೀ ಜಿ. ವಿ. ಆಂಜನಪ್ಪ.—ಸರಕಾರದವರು ಅನೇಕ ಅನುಕೂಲಕ್ಕೆ ಕೈಗಾರಿಕೆಗಳಿಗೆ ಬಂಡವಾಳ ಬೇಕಾದಷ್ಟು ಹಾಕಿದ್ದಾರೆ. ನಮ್ಮ ರಾಜ್ಯದ ವ್ಯವಸಾಯಗಾರರ ಹಿತದೃಷ್ಟಿಯಿಂದ ಹೆಚ್ಚು ಆಹಾರ ಧಾನ್ಯ ಬೆಳೆಯುವ ದೃಷ್ಟಿಯಿಂದ ಇದಕ್ಕೆ ಬಂಡವಾಳ ಏತಕ್ಕೆ ಹಾಕಬಾರದು?

ಶ್ರೀ ಕೆ. ವಿ. ಶಂಕರಗೌಡ.—ಅನುಕೂಲಕ್ಕೆ ಕೈಗಾರಿಕೆಗಳಿಗೆ ಸರಕಾರ ಬಂ[illegible]ಕಿದೆ ಎನ್ನುವುದನ್ನು ಒಪ್ಪುವುದಿಲ್ಲ.

ಶ್ರೀ ಜೆ. ಬಿ. ಮಾಲ್ಲಾರಾಧ್ಯ.—ರೈತರಿಗೆ ಬೇಕಾಗಿರುವ ಪವರ್ ಟಿಲರ್ಸ್ ಒದಗಿಸುವ ವಿಚಾರದಲ್ಲಿ ಅಧಿಕಾರಿಗಳಲ್ಲಿ ಇತಕ್ಕಿಂತ ಮನೋಭಾವನೆಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಕೆ. ವಿ. ಶಂಕರಗೌಡ.—ಪ್ರಯತ್ನ ಮಾಡುತ್ತೇವೆ.

Sri M. P. L. SASTRY.—Is the power consumed by this power tiller on the soil of a particular area, the same as that taken by a power tiller on a hard soil; or does it make any difference?

Sri K. V. SHANKARA GOWDA.—It does not make any difference.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—225 ವಿದ್ಯುತ್ ನೇಗಿಲುಗಳನ್ನು ಜಪಾನಿನಿಂದ ತರಿಸಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಇಷ್ಟೆಯೇ ಪವರ್ ಟಿಲರ್ಸ್ ತಯಾರ್ಮಾಡುವವರೆಗೆ ಜಪಾನಿನಿಂದ ತರಿಸಿರುವುದನ್ನು ರೈತರಿಗೆ ಹಂಚುತ್ತೀರಿ, ಕೇಂದ್ರ ಸರಕಾರ ಅರಾಟ್ ಮಾಡಿದ್ದನ್ನು ರೈತರಿಗೆ ಕೊಡುವಾಗ್ಗೆ ಅದನ್ನು ಹಂಚುವುದಕ್ಕೆ ಪ್ರೈವೇಟ್ ಏಜೆನ್ಸಿ ಇದೆಯೇ? ರೈತರಿಗೆ ತಲಪುವ ಹಾಗೆ ಮಾಡಲು ಪ್ರೈವೇಟ್ ಏಜೆನ್ಸಿ ಇಲ್ಲದೆ ಡೈರೆಕ್ಟ್ ಆಗಿ ಕಳಿಸುವ ಹಾಗೆ ಮಾಡುತ್ತೀರಾ?

Sri K. V. SHANKARA GOWDA.—I have examined it and will see what can be done.

Smt. S. H. MARKER.—I think this project of the power tiller was initiated two years ago. Then I wonder why these 225 power tillers were imported. I am not for importing these tillers.

Sri K. V. SHANKARA GOWDA.—Because we want to stop this import, we are having a factory of our own.

ಶ್ರೀ ಎಂ. ವಿ. ವೆಂಕಟಪ್ಪ.—ಜಪಾನಿನ ಸಹಕಾರದಿಂದ ವಿದ್ಯುತ್ ನೇಗಿಲುಗಳನ್ನು ತಯಾರಿಸುವುದಕ್ಕಾಗಿ ರಾಜ್ಯದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸುವ ಯೋಜನೆ ಇದೆ ಎಂದು ಹೇಳಿದರು. ನಮ್ಮ ಸರಕಾರವೇ ಏತಕ್ಕೆ ಈ ಕಾರ್ಖಾನೆಯನ್ನು ಸ್ಥಾಪನೆ ಮಾಡಬಾರದು?

ಶ್ರೀ ಕೆ. ವಿ. ಶಂಕರಗೌಡ.—ಎಲ್ಲಾ ಕೈಗಾರಿಕೆಗಳನ್ನು ಸರಕಾರವೇ ತೆಗೆದುಕೊಳ್ಳಲು ಆಗುವುದಿಲ್ಲ.

Mahajan Commission Report

21. Sri M. V. VENKATAPPA (Graduates' Constituency).—

Will the Chief Minister be pleased to state:—

(*a*) whether the Central Government has invited comments from the State Government on the report submitted by the Mahajan Commission on the border disputes between Mysore and Maharashtra and Mysore and Kerala;

(*b*) if so, the nature of reply sent by the State Government;